ಸಾಕ್ಷಿಯನ್ನು ಪುನಃ ದಿಃ 28.11.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆಎಂ ವಕೀಲರಿಂದಃ**

ಆರೋಪಿ ಹಣ ಪಡೆದುಕೊಳ್ಳುವ ತುರ್ತು ಅವಶ್ಯಕತೆ ಏನು ಇತ್ತು ಎಂದರೆ ಗೊತ್ತಿಲ್ಲ. ಅರೋಪಿಯ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಎಂದರೆ ಅವರಿಗೆ 3 ಜನ ಮಕ್ಕಳು ಎಂದು ತಿಳಿಸಿರುತ್ತಾರೆ. ಅವರು ಏನು ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ಕಾರಣ ಇಲ್ಲದೇ ಯಾವುದೇ ವ್ಯಕ್ತಿ ಹಣವನ್ನು ಸಾಲವಾಗಿ ನೀಡುವುದಿಲ್ಲ ಎಂದರೆ ಹೌದು, ಸಾಕ್ಷಿ ಮುಂದುವರೆದು ಆರೋಪಿಯ ಮನೆಯಲ್ಲಿ ತೊಂದರೆ ಇದ್ದ ಕಾರಣ ಕೇಳಿರುತ್ತಾರೆ. ಆರೋಪಿಗೆ ಹಣ ನೀಡಿದ್ದೇನೆ ಎನ್ನಲಾದ ದಿನದಿಂದ ಆರೋಪಿ ಯಾವುದೇ ಫ್ಯಾಕ್ಟರಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ನಾನು ವ್ಯಾಪಾರಿಯಲ್ಲ, ವ್ಯವಸಾಯ ಮಾಡುತ್ತೇನೆ ಎಂದರೆ ಸರಿ. ಆರೋಪಿ ಸರ್ಕಾರಿ ನೌಕರನೂ ಅಲ್ಲ ಮತ್ತು ಸಂಬಳ ಬರುವಂತಹ ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿ. ಆರೋಪಿಗೆ ವ್ಯವಸಾಯ ಮಾಡಲು ನೀರಾವರಿ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಆದಾಯದ ಮೂಲ ಇರುವುದಿಲ್ಲ ಎಂದರೆ business ಮಾಡುತ್ತಿದ್ದೇನೆ ಎಂದು ತಿಳಿಸಿರುತ್ತಾರೆ. ಆರೋಪಿ ಯಾವ business ಮಾಡುತ್ತಾರೆ ಎಂದರೆ ನಿವೇಶನಗಳ business. ಈ ವಿಚಾರವನ್ನು ನೋಟೀಸ್ ನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

2. ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಆರೋಪಿಗೆ ಸಾಲ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ನೀಡಿದ ದಿನದಂದೇ ಚೆಕ್ ನೀಡಿರುತ್ತಾರೆ ಎಂದು ಸುಳ್ಳಾಗಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಿಪಿ 1 ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಯಾವ ದಿನಾಂಕ ಮತ್ತು ಸಮಯದಂದು ಆರೋಪಿ ಚೆಕ್ ನೀಡಿದ್ದಾರೆ ಎಂಬುದರ ಬಗ್ಗೆ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 2000 ರೂ ಮುಖ ಬೆಲೆಯ ಹಣ ಆರೋಪಿ

ನೀಡಿದ್ದರೆ ಅದರ ಬಗ್ಗೆ ನಾನು ನೋಟೀಸಿನಲ್ಲಿ ತಿಳಿಸುತ್ತಿದ್ದೆ ಎಂದರೆ ನನಗೆ ಎಷ್ಟು ತಿಳುವಳಿಕೆ ಇದೆಯೊ ಅಷ್ಟರ ಬಗ್ಗೆ ತಿಳಿಸಿರುತ್ತೇನೆ. ಮಾವಿನ ಹಣ್ಣನ್ನು ಯಾವ ಮಂಡಿಗೆ ಹಾಕಿರುತ್ತೀರಿ ಎಂದರೆ ಮಂಡಿಗೆ ಹಾಕಿರುವುದಿಲ್ಲ. ನನಗೆ ಆಸ್ತಿಗಳು ನನ್ನ ತಂದೆಯಿಂದ ಬಂದಿರುತ್ತದೆ ಮತ್ತು ನಾನು ಖರೀದಿಸಿರುತ್ತೇನೆ. ಮಾವಿನ ತೋಟ ಇರುವ ಜಮೀನಿನ ನಂಬರ್ ಏನು ಎಂದರೆ ಸರ್ವೆ ನಂಬರ್ 46/ಪಿ-5, 3 ಎಕರೆ, 59/2, 2 ಎಕರೆ. 108/2, 2 ಎಕರೆ, 109/2, 2 ಎಕರೆ .

ನನ್ನ ತಂದೆಗೆ ಇಬ್ಬರು ಮಕ್ಕಳು. ನನ್ನ ತಂದೆ-ತಾಯಿ ತೀರಿಕೊಂಡ ನಂತರ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಹಾಜರುಪಡಿಸುತ್ತೀರಾ ಎಂದರೆ ಹಾಜರುಪಡಿಸುತ್ತೇನೆ. ಮಾವಿನ ತೋಟ ಇರುವ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಜಮೀನಿನಿಂದ ಯಾವುದೇ ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ.

ಗಿರಿ ಎನ್ನುವವರು ಯಾವ ಊರಿನವರು ಎಂದರೆ ನಮ್ಮ ಊರಿನವರು. ಈಗ ಅವರು ನಮ್ಮ ಊರಿನಲ್ಲಿ ಇರುವುದಿಲ್ಲ. ಸದರಿ ಗಿರಿಗೂ ಮತ್ತು ಆರೋಪಿಗೂ ಪರಿಚಯ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ರ ಬಗ್ಗೆ ಆರೋಪಿಗೆ ಯಾವ ರೀತಿ ಮಾಹಿತಿ ಕೊಟ್ಟಿರುತ್ತೀರಾ ಎಂದರೆ ನೆನಪಿರುವುದಿಲ್ಲ. ನಾನು ಸುಳ್ಳು ದೂರನ್ನು ಸಾಭೀತುಪಡಿಸಲು ನೆನಪಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಕಾಲಪರಿಮಿತಿ ಒಳಗಡೆ ತರಲು ವಕೀಲರ ಮಾತು ಕೇಳಿ ಮತ್ತೊಮ್ಮೆ ಚೆಕ್ ಅನ್ನು ಬ್ಯಾಂಕಿಗೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1ರ ಹಣವನ್ನು ನೀಡುವ ಬಾಧ್ಯತೆ ಆರೋಪಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿ ಚೆಕ್ ನ ನಂಬರ್ 000002 ಆಗಿರುತ್ತದೆ ಚಲನ್ ನಲ್ಲಿ 00002 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ 6 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನೋಟೀಸ್ ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮೋಸ ಮಾಡಿದ್ದರೆ ಎಂದು

ಠಾಣೆಯಲ್ಲಿ ದೂರು ದಾಖಲಿಸಿದ್ದಿರಾ ಎಂದರೆ ಮೊದಲು ಕೊಟ್ಟಿದ್ದೇನೆ. ಅದಕ್ಕೆ ಸಂಬಂದಪಟ್ಟ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಮೊದಲು ಕೊಟ್ಟಿರುತ್ತೇನೆ. ಆರೋಪಿಯ ವಿರುದ್ದ ದೂರು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಮತ್ತು ನೋಟೀಸಿನಲ್ಲಿ ಹಣವನ್ನು ಯಾವ ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ.

2018 ರಲ್ಲಿ 50 ಸಾವಿರ ಹಣವನ್ನು ನೀಡುವುದಾಗಿ ಆರೋಪಿ ನನ್ನ ಬಳಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಎನ್, ಗಂಗಾಧರ್ ಎನ್ನುವವರ ಕಡೆಯಿಂದ 50 ಸಾವಿರಹಣವನ್ನು ಆರೋಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 02.11.2018 ರಂದು ನನ್ನ ಜೆರಾಕ್ಸ್ ಅಂಗಡಿಯಲ್ಲಿ ಸದರಿ ಹಣವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎನ್ . ಗಂಗಾಧರ್ ರವರಿಂದ 50 ಸಾವಿರ ರೂ ಹಣವನ್ನು ಪಡೆದುಕೊಂಡು ಆರೋಪಿಗೆ ಹಣವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣಕ್ಕಾಗಿ ಶೇಕಡ 3 ಪರ್ಸೆಂಟ್ ಬಡ್ಡಿ ಕೊಡಬೇಕು ಎಂದು ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಸಹಿ ಮಾಡಿರುವ ಚೆಕ್ ಅನ್ನು ನನ್ನ ಮುಖಾಂತರ ಗಂಗಾಧರ್ ರವರಿಗೆ ನೀಡಬೇಕು ಎಂದು ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ನಿಪಿ 1 ಖಾಲಿ ಚೆಕ್ ಅನ್ನು ಆರೋಪಿ ಸಹಿ ಮಾಡಿ ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚೆಕ್ ಅನ್ನು ಗಂಗಾಧರ್ ರವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಅನ್ನು 50 ಸಾವಿರ ಹಣದ ಭದ್ರತೆಗಾಗಿ ಆರೋಪಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 02.04.2019 ರಂದು ಆರೋಪಿ 7 ಸಾವಿರದ 500 ರೂ ಗಳ ಬಡ್ಡಿಯನ್ನು ಗಂಗಾಧರ್ ರವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಉಳಿದ ಹಣವನ್ನು ನೀಡಲು 3 ತಿಂಗಳ ಕಾಲಾವಧಿಯನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗಂಗಾಧರ್ ರವರು ಯಾರು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಗಂಗಾಧರ್ ರವರು ನನಗೆ ಹಣ ನೀಡಲು ಒತ್ತಾಯಿಸಿದ

ಕಾರಣ ನಾನು ಅವರಿಗೆ 50 ಸಾವಿರ ರೂಗಳನ್ನು



ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಅನ್ನು ನನಗೆ ನೀಡಿ ಅರೋಪಿಯಿಂದ ಹಣ ಪಡೆದುಕೊಳ್ಳಲು ಗಂಗಾಧರ್ ರವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನಗೆ 50 ಸಾವಿರ ರೂ ಹಣವನ್ನು ನೀಡುತ್ತೇನೆ, ಚೆಕ್ ಅನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ರಾಯಲ್ ಮಾನ ದಿನ್ನೆಯಲ್ಲಿ ಎಸ್.ಬಿಐ ಖಾತೆ ಹೊಂದಿರುತ್ತೇನೆ ಎಂದರೆ ಸರಿ. ದಿಃ 18.10.2019 ರಂದು 50 ಸಾವಿರ ಹಣವನ್ನು ನನ್ನ ಖಾತೆಗೆ ಆರೋಪಿ ಟ್ರಾನ್ಸ್ ಪರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಆರೋಪಿಯ ಚೆಕ್ ನಂಬರ್ 000003 ಮುಖಾಂತರ ನನ್ನ ಖಾತೆಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣ ಪಡೆದುಕೊಂಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಖಾತೆ ನಂಬರ್ 929016021157 ಎಂದರೆ ನೆನಪಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯಲ್ಲಿ 50 ಸಾವಿರ ಹಣ ನನ್ನ ಖಾತೆಗೆ ಜಮಾ ಆಗಿರುವ ಬಗ್ಗೆ ನಮೂದು ಆಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿ 50 ಸಾವಿರ ರೂ ಹಣದ ಭದ್ರತೆಗಾಗಿ ನೀಡಿದ ನಿಪಿ 1 ಅನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ 10 ಲಕ್ಷ ಹಣ ನೀಡುವ ಬಾಧ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಸಂಬಂದಪಟ್ಟಂತೆ ಆರೋಪಿ ಮತ್ತು ನನ್ನ ನಡುವೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,